**ಓ.ಎಸ್. ನಂಃ 233/2022**
**ಪಿ.ಡಬ್ಲ್ಯೂಃ 1**

**ದಿನಾಂಕ 08.01.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಆರ್.ಎಸ್.ಪಿ ವಕೀಲರಿಂದಃ</u>**

ಈ ದಾವೆಯ ವಾದಿ ನನ್ನ ತಂದೆಯಾಗಿದ್ದು ಅವರ ಪರ ಸಾಕ್ಷ್ಯ ನುಡಿಯಲು ವಿಶೇಷ ಅಧಿಕಾರ ಪತ್ರವನ್ನು ವಾದಿಯು ನೀಡಿರುತ್ತಾರೆ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ವಾದಿ ಸಾಕ್ಷಿಗೆ ನೀಡಿದ ವಿಶೇಷ ಅಧಿಕಾರ ಪತ್ರವನ್ನು ನಿಪಿ-1 ಎಂದು, ಪಹಣಿಗಳನ್ನು ನಿಪಿ-2 ಮತ್ತು 3 ಎಂದು, ಪೋಡಿ ನಕಾಶೆಗಳನ್ನು ನಿಪಿ-4 ಮತ್ತು 5 ಎಂದು, ದಿನಾಂಕ 07.11.2022 ರಂದು ಹೊರಡಿಸಿದ ಆದೇಶವನ್ನು ನಿಪಿ-6, ಅಪೀಲ್ ಮೆಮೋ ಮತ್ತು ಎರಡು ಮದ್ಯಂತರ ಅರ್ಜಿಗಳ ದೃಡೀಕೃತನ ನಕಲುಗಳನ್ನು ನಿಪಿ-7 ರಿಂದ 9, ಫಾರ್ಮ ನಂ.10 ರ ದೃಡೀಕೃತ ನಕಲನ್ನು ನಿಪಿ-10, ಹೇಳಿಕೆ ಪತ್ರದ ದೃಡೀಕೃತ ನಕಲನ್ನು ನಿಪಿ-11, ನಾಕಶೆಯ ದೃಡೀಕೃತ ನಕಲನ್ನು ನಿಪಿ-12, ಗ್ರಾಮ ನಕಾಶೆಯನ್ನು ನಿಪಿ-13 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**